spent. The Company spends quite a lot of money for the other amenities of labour, such as canteen, medical aid, recreation, education of the children and so on. Housing, I have already referred to. On all these matters the Company spends money and they realise this responsibility. There are two labour welfare officers also paid by the Company to look after the welfare of labour.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸುಮಾರು 9 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದೆಯೆಂದು ಹೇಳಿದೆ. ತಮ್ಮ ಆಫೀಸರ ಮೂಲಕವೇ ಅಥವ ಯಾರ ಮೂಲಕ ಅದನ್ನು ಪರಿಹಾರ ರೂಪವಾಗಿ ಕೊಡುತ್ತಿದ್ದೀರಿ?

Mr. SPEAKER.—That expenditure is on account of the pay of the officers.

ಶ್ರೀ ಎಸ್. ರಂಗರಾಮಯ್ಯನವರು.—ಯಾರ ಮುಖಾಂತರ ಕೊಡುತ್ತಿದೆ?

The Hon'ble Sri K.T. BHASHYAM.—Through the Labour Department.

Village Group Development Scheme.

Q.—131. Sri A. SUBBARAYA SETTY (Kolar District—General).—

Will the Government be pleased to state :—

(*a*) when the Village Group Development Scheme was given effect to ;

(*b*) in how many circles this scheme is introduced ;

(*c*) the expenditure incurred for implementing this scheme so far ;

(*d*) the total number of Supervisors appointed for this purpose ;

(*e*) the number that are trained in village industries and which are they ;

(*f*) the number of new village industries started up till now and the amount invested and the turnover in each industry ?

A.—The Hon'ble Sri H. C. DASAPPA (Minister for Finance and Industries).—

(*a*) The scheme came into operation from March 1950.

(*b*) 208 Circles.

(*c*) Rs. 3,62,671.

(*d*) Eight.

(*e*) This is a Scheme mainly for stepping up production by the promotion of fresh industries or expanding existing industries.

(*f*) (1) 1,460.

(2) Rs. 9,16,792.

(3) Rs. 14,16,016.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.—ಕೈಗಾರಿಕೆಗಳು ಎಷ್ಟು ಸರ್ಕಲ್‌ಗಳಲ್ಲಿ ಪ್ರಾರಂಭವಾಗಿವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸರ್ವೇ ಸಾಧಾರಣವಾಗಿ ಎಲ್ಲಾ ಸರ್ಕಲ್‌ಗಳಲ್ಲೂ ಪ್ರಾರಂಭವಾಗಿವೆ. ಆದರೆ ಕೆಲವು ಸರ್ಕಲ್‌ಗಳಲ್ಲಿ ಅಷ್ಟು ಹೆಚ್ಚಾಗಿರಲಾರದು. ಒಟ್ಟು ಸಂಖ್ಯೆ 1,460 ಎಂದು ಹೇಳಿದೆ.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.—ಕೆಲವು ಸರ್ಕಲ್‌ಗಳಲ್ಲಿ ಕಚ್ಚಾ ಪದಾರ್ಥಗಳು ಉಪಯೋಗಿಸುವುದಕ್ಕೆ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಇಲ್ಲದಿರುವುದರಿಂದ ಕೆಲಸ ಅಲ್ಲಿ ನಿಧಾನವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬಂದಿದೆ.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.—ಅದಕ್ಕೆ ಏನು ಮಾಡಿದ್ದೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೇ ಪ್ರತ್ಯೇಕ ಸಮಿತಿಯಿದೆ. ಅದಕ್ಕೆ ಹೆಚ್ಚಿನ ಅಧಿಕಾರ ಕೊಟ್ಟಿದೆ. ಅವರು ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳಿರುವುದರಿಂದ ಸಂಶಯಪಡಬೇಕಾಗಿಲ್ಲ.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.—ಆ ಸಮಿತಿಯವರಿಗೆ ಆಫೀಸಿನವರ ಸಂಬಳ ಕೊಡುವುದಕ್ಕೆ ಮತ್ತು ಪ್ರವೀಣರನ್ನು ನೇಮಕ ಮಾಡುವುದಕ್ಕೆ ಅಧಿಕಾರವಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಮಿತಿ ಶಿಫಾರ್ಸು ಮಾಡಿದರೆ ನೇಮಕಮಾಡಲಾಗುತ್ತದೆ; ತೊಂದರೆಯಿಲ್ಲ.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.— ಶಿಫಾರಸು ಮಾಡಿದ್ದರೂ ನೇಮಕಮಾಡಿಲ್ಲ. ಜಾಗ್ರತೆ ನೇಮಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ವಿಚಾರಮಾಡಬೇಕು. ಆರೀತಿ ನೇಮಕವಾದರೆ ಸಂಬಳ ಕೊಡಬೇಕು, ಅವರು ಅದಕ್ಕೆ ಹಣ ಒದಗಿಸಿಲ್ಲವೆಂದು ಕಾಣುತ್ತದೆ.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.— ಮೂರು ಲಕ್ಷ ಚಿಲ್ಲರೆ ಖರ್ಚಾಗಿರುವುದು ಸಿಬ್ಬಂದಿಗೇ ಅಥವಾ ಗ್ರಾಂಟಿಗೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಗ್ರಾಂಟು ಸೇರಿಲ್ಲ.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.— ಸೂಪರ್ವೈಜರ್‌ಗಳನ್ನು ನೇಮಕಮಾಡಿದ್ದೀರಿ. ಅವರ ಕೆಲಸವೇನು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಸೂಪರ್ವೈಜರಿಲ್ಲದೆ ಯಾವ ಕೆಲಸತಾನೆ ನಡೆಯಲು ಸಾಧ್ಯ? 208 ಸರ್ಕಲ್‌ಗಳು, ಅದರ ಸಮಿತಿಗಳು ಇವುಗಳ ಕೆಲಸವನ್ನು ನೋಡಿಕೊಳ್ಳಲು ಸೂಪರ್ವೈಜರ್ ಬೇಕೇಬೇಕು. ಇನ್ನೂ ಹೆಚ್ಚಾಗಿ ಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.—ಅವರನ್ನು ನೇಮಕಮಾಡುವಾಗ ಟೆಕ್ನಿಕಲ್ ಪರಿಜ್ಞಾನ ಇರುವವರನ್ನೇ ಚುನಾಯಿಸುವುದರಿಂದ ಆ ಕೆಲಸಕ್ಕೆ ಹೆಚ್ಚು ಅನುಕೂಲವಾಗುವುದಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಹಾಗೆಯೇ ಮಾಡಿರುವುದು.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.— ಈಗಿರುವವರಿಗೆ ಕೈಗಾರಿಕೆಗಳ ಪರಿಶ್ರಮವೇ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಇಲ್ಲ.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.— ಈಗ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜನಿಯರಿಂಗ್ ಪಾಸ್ ಮಾಡಿರುವವರೇ ಇದ್ದಾರೆಂಬುದು ಗೊತ್ತೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಅವರಿಗೆ ಏನು ಅರ್ಹತೆಯಿರಬೇಕೆಂಬುದು ಗೊತ್ತಿಲ್ಲ. ಅರ್ಹತೆಯುಳ್ಳವರನ್ನೇ ಈಗ ನೇಮಿಸಿರುವುದು.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.— ಅನೇಕ ಕಡೆ ಕೈಗಾರಿಕಾ ಪರಿಶ್ರಮವಿಲ್ಲದಿರುವವರನ್ನೇ ಸೂಪರ್ವೈಜರಾಗಿ ನೇಮಿಸುವುದರಿಂದ ಬೇರೆಯವರಿಗೆ ಅವಕಾಶ ತಪ್ಪುವುದಲ್ಲದೆ ಕೈಗಾರಿಕೆಗಳು ಬೆಳೆಯಲು ಅವಕಾಶವೂ ಇಲ್ಲದೇ ಹೋಗುವುದು ಎಂಬುದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಪ್ರವೀಣರ ಸಮಿತಿಗೆ ಸರ್ ಎಂ. ವಿಶ್ವೇಶ್ವರಯ್ಯನವರೇ ಪ್ರೆಸಿಡೆಂಟರಾಗಿದ್ದಾರೆ. ಅವರಿಗಿಂತಲೂ ಮೇಧಾವಿಗಳೂ, ಹೆಚ್ಚು ಅನುಭವ ಇರುವವರೂ ಆ ಸ್ಥಾನಕ್ಕೆ ಬರಲು ಸಾಧ್ಯವಿಲ್ಲ. ಅವರೇ ಚುನಾಯಿಸಿ ಕಳುಹಿಸುತ್ತಾರೆ.

ಶ್ರೀ ಎ. ಸುಬ್ಬರಾಯಶೆಟ್ಟಿಯವರು.—ನಮ್ಮ ಜಿಲ್ಲೆಗೆ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪಾಸ್ ಮಾಡಿರುವವರನ್ನೇ ಸೂಪರ್ವೈಜರಾಗಿ ಹಾಕಿದೆ. ಅವರಿಗೆ ಸಾಕಷ್ಟು ಅನುಭವವಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಆಗಿದ್ದರೆ ಬಹಳ ಒಳ್ಳೆಯದೆಂದು ನನಗೆ ತೋರುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—(b) ಪ್ರಶ್ನೆಗೆ ಉತ್ತರವಾಗಿ 14 ಲಕ್ಷ ಚಿಲ್ಲರೆ ರೂಪಾಯಿಗಳ ವಸ್ತುಗಳು ತಯಾರಾಗಿವೆಯೆಂದು ಹೇಳಿದೆ. ಅದರಲ್ಲಿ ಏನಾದರೂ ಖರ್ಚಾಗಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಖರ್ಚಾಗಿರುತ್ತೆ. ಖರ್ಚಾಗಲಿಲ್ಲವೆಂದು ಪುಕಾರು ಯಾವುದೂ ಬಂದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.— ಅವು ಸ್ಥಳದಲ್ಲೇ ಇವೆಯೋ ಅಥವಾ ರಫ್ತಾಗುತ್ತಿವೆಯೋ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೆಲವು ರಫ್ತಾಗಿರಬಹುದು. The scheme is based on self-sufficiency. ಖರ್ಚಾಗುವ ಹಾಗಿವೆ.

ಶ್ರೀ ಎಸ್. ರಂಗರಾಮಯ್ಯನವರು.—ಅಸಲು ಬೆಲೆ ಕಳೆದು ಲಾಭವೆಷ್ಟು ಬರ ಬಹುದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನು ಲೆಕ್ಕ ಹಾಕಬೇಕು.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಈಗ ಉತ್ಪತ್ತಿ ಬಂದಿರುವುದು ಯಾವ ಕೈಗಾರಿಕೆಗಳಿಂದ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—1,460 ಕೈಗಾರಿಕೆಗಳಿಂದ.

ಶ್ರೀ ಬಿ. ಚನ್ನಬೈರೇಗೌಡರು.—ಆ ಕೈಗಾರಿಕೆಗಳನ್ನು ಸ್ಥಾಪನೆಮಾಡಲು ಮೂಲ ಧನ ಸರ್ಕಾರದವರು ಇನ್ವೆಸ್ಟ್ ಮಾಡಿರುವುದೆಷ್ಟು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—9 ಲಕ್ಷ ಚಿಲ್ಲರೆ ಎಂದು ಉತ್ತರದಲ್ಲೇ ಹೇಳಿದೆ.

Formation of an Industrial Directorate in Mysore.

Q.—165. **Sri C. R. BASAPPA** (Tumkur District—General).—

Will the Government be pleased to state:—

(*a*) whether they have considered the question of formation of Industrial Directorate in Mysore;

(*b*) if so, when they are going to start such a Directorate?

A.—**The Hon'ble Sri H. C. DASAPPA** (Minister for Finance and Industries).—

(*a*) and (*b*) Yes; the question is under consideration of Government, and a decision will be taken as soon as possible.

ಶ್ರೀ ಸಿ. ಆರ್. ಬಸಪ್ಪನವರು.—ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆ ಡೈರೆಕ್ಟೊರೇಟನ್ನು ಸ್ಥಾಪನೆ ಮಾಡಲು ಏನು ಏರ್ಪಾಡು ನಡೆದಿದೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು—ಇನ್ನೂ ಆ ವಿಚಾರ ಪರ್ಯಾಲೋಚನೆಯಲ್ಲೇ ಇದೆ.

ಶ್ರೀ ಸಿ. ಆರ್. ಬಸಪ್ಪನವರು.—ಅದರಿಂದ ಏನು ಪ್ರಯೋಜನವಿದೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಲ್ಲಾ ಕಡೆಗಳಲ್ಲೂ ಕೈಗಾರಿಕೆಗಳನ್ನು ನೇರವಾಗಿ ಸರ್ಕಾರದವರ ಕೈಯಲ್ಲೇ ಇಟ್ಟುಕೊಳ್ಳುವುದು ಸೂಕ್ತವಲ್ಲ. ಅದಕ್ಕೆ ಪೂರ್ಣ ಮಾಹಿತಿಯಿರುವ ಮತ್ತು ಪ್ರವೀಣರನ್ನೊಳಗೊಂಡ ಒಂದು ಡೈರೆಕ್ಟೊರೇಟ್ ಇರಬೇಕು ಮತ್ತು ಅವರಿಗೆ ಮ್ಯಾನೇಜ್‌ಮೆಂಟ್, ಪ್ರೊಡಕ್ಷನ್, ಸೇಲ್ಸ್, ಪರ್ಚೇಸ್ ಇಂಥವುಗಳಿಗೆಲ್ಲಾ ಸ್ವಲ್ಪ ಅಧಿಕಾರ ಕೊಡಬೇಕು ಎಂದು ಸಲಹೆ ಅನೇಕ ಕಡೆಗಳಿಂದ ಬಂದಿದೆ. ಕಸ್ತೂರಿಭಾಯ್ ಲಲ್ಲೂಭಾಯ್‌ರವರು ಶಿಫಾರ್ಸುಮಾಡಿದ್ದಾರೆ. ಗೋರ್ವಾಲಾರವರು ಈಚೆಗೆ ವರದಿಯನ್ನು ಕೊಟ್ಟಿದ್ದಾರೆ. ಅವರೂ ಇದೇ ರೀತಿ ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಸಿ. ಆರ್. ಬಸಪ್ಪನವರು.—ಈ ವಿಚಾರದಲ್ಲಿ ಒಂದು ನಿರ್ಧಾರಕ್ಕೆ ಬರಲು ಎಷ್ಟು ದಿವಸ ಬೇಕು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೈಗಾರಿಕೆಗಳಿಗೆ ಸಂಬಂಧಪಟ್ಟ ಒಂದು ಸ್ಟ್ಯಾಂಡಿಂಗ್ ಸಮಿತಿಯಿದೆ. ಅವರು ಒಂದು ಸಬ್-ಕಮಿಟಿ ಮಾಡಿದ್ದಾರೆ. ಎಷ್ಟು ಬೇಗ ಅವರು ವರದಿ ಕೊಡುತ್ತಾರೋ ಅಷ್ಟು ಬೇಗ ಆರ್ಡರು ಪಾಸ್‌ಮಾಡುತ್ತೇವೆ.

ಶ್ರೀ ಜಿ.ಎ. ಆಚಾರ್ಯರವರು (ಬೆಂಗಳೂರು ಜಿಲ್ಲೆ).—ಎರಡು ವರ್ಷಗಳ ಹಿಂದೆ ಚೇಂಬರ್ ಆಫ್ ಕಾಮರ್ಸ್‌ನಲ್ಲಿ ಈ ವಿಷಯವನ್ನು ಬಹಳ ಬೇಗ ಇತ್ಯರ್ಥ ಮಾಡುತ್ತೇವೆಂದು ಹೇಳಿದ್ದುದು ಗಮನದಲ್ಲಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಟಿಂಗಳೂರು ಸಿಟಿ).—ಆದಷ್ಟು ಜಾಗ್ರತೆ ಅಂದರೆ ಮೂರು ನಾಲ್ಕು ತಿಂಗಳೊಳಗಾಗಿ ಆರ್ಡರನ್ನು ಖಂಡಿತ ಮಾಡುತ್ತೀರಾ?